
# ‘ಶ್ರೀರಾಮಕೃಷ್ಣ ಭಾವಸಂಗಮ’ : ಒಂದು ಅಪರೂಪದ ಸ್ಮೃತಿ ಸಂಕಲನ




*ಕೃತಿ*
**ಶ್ರೀ ಶ್ರೀರಾಮಕೃಷ್ಣ ಭಾವಸಂಗಮ**
*ಆಂಗ್ಲ ಮೂಲ*
**ಸ್ವಾಮಿ ಚೇತನಾನಂದ**
*ಕನ್ನಡಾನುವಾದ*
**ಮಾತಾ ತ್ಯಾಗಮಯೀ**
*ಪ್ರಕಾಶಕರು*
**ಶ್ರೀ ರಾಮಕೃಷ್ಣ ಆಶ್ರಮ,**
**ಮೈಸೂರು - 570 020.**
**ದೂ: 0821-2417444**
*ಪುಟಗಳು* : **592**
*ಬೆಲೆ* : **180/**

ಕನ್ನಡದಲ್ಲಿ ಶ್ರೀರಾಮಕೃಷ್ಣರನ್ನು ಕುರಿತು ಅನೇಕ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಅವುಗಳಲ್ಲಿ ಚಿತ್ರಿತವಾಗಿರುವ ಶ್ರೀರಾಮಕೃಷ್ಣರ ವ್ಯಕ್ತಿತ್ವಕ್ಕಿಂತ ತುಸು ಭಿನ್ನವೂ, ಹೆಚ್ಚು ವೈವಿಧ್ಯ ಪೂರ್ಣವೂ ಆದ ನೋಟ ಅವರ ಹತ್ತು ಹಲವು ಶಿಷ್ಯರ ಸ್ಮೃತಿಚಿತ್ರಗಳಿಂದ ದೊರಕುತ್ತದೆ. **‘ಶ್ರೀರಾಮಕೃಷ್ಣ ಭಾವಸಂಕಲನ’** ಎಂಬ ಕೃತಿಯಲ್ಲಿ ಇಂಥ ಹಲವು ಬರಹಗಳನ್ನು ಒಂದೆಡೆ ಸೇರಿಸಿ ಪ್ರಕಟಿಸಲಾಗಿದ್ದು, ಶ್ರೀರಾಮಕೃಷ್ಣರ ಜೀವನಚರಿತ್ರೆಗಳಲ್ಲಿ ದೊರೆಯದ ಅನೇಕ ವಿವರಗಳು ಇಲ್ಲಿ ಲಭ್ಯವಾಗಿವೆ. ಆಂಗ್ಲಮೂಲದಲ್ಲಿರುವ ‘Ramakrishna As We Saw Him’ ಎಂಬುದು ಸ್ವಾಮಿ ಚೇತನಾನಂದರಿಂದ ಸಂಕಲಿತವಾದ ಗ್ರಂಥ; ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿರುವ ವೇದಾಂತ ಸೊಸೈಟಿಯು ಮೊದಲ ಬಾರಿಗೆ ಪ್ರಕಟಿಸಿ, ನಂತರ ಕೊಲ್ಕತ್ತದ ಅದ್ವೈತ ಆಶ್ರಮದಿಂದ ಇದು ಪ್ರಕಟವಾಯಿತು. ಈಗ ಈ ಗ್ರಂಥದ ಅನುವಾದದ ಮೂಲಕ ಇದು ಕನ್ನಡಿಗರಿಗೂ ಲಭ್ಯವಾಗುವಂತಾಗಿದೆ. ಮೈಸೂರು ರಾಮಕೃಷ್ಣ ಆಶ್ರಮದಿಂದ ಪ್ರಕಟ ವಾಗಿರುವ ಈ ಕೃತಿಯು ಶ್ರೀರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯಕ್ಕೆ ಒಂದು ಅಮೂಲ್ಯ ಸೇರ್ಪಡೆಯಾಗಿದೆ.

ಈ ಗ್ರಂಥದಲ್ಲಿ ಶ್ರೀರಾಮಕೃಷ್ಣರ ಸ್ಮೃತಿಲೇಖನಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸ ಲಾಗಿದ್ದು, ಈ ಬರಹಗಳನ್ನು ವಿಷಯದ ಹಾಗೂ ಲೇಖಕರ ಹಿನ್ನೆಲೆಗನುಗುಣವಾಗಿ ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ: ೧) ಬಂಧುಗಳು ಮತ್ತು ಸಂನ್ಯಾಸೀ ಶಿಷ್ಯರು ೨) ಗೃಹಸ್ಥ ಶಿಷ್ಯರು ಮತ್ತು ಭಕ್ತರು ೩) ಬ್ರಾಹ್ಮ ಭಕ್ತರು ಹಾಗೂ ಅಭಿಮಾನಿಗಳು ಹಾಗೂ ೪) ಅನುಬಂಧಗಳು. ಮೊದಲನೆಯ ಭಾಗದಲ್ಲಿ ಪ್ರಧಾನವಾಗಿ ಶ್ರೀಮಾತೆ ಶಾರದಾದೇವಿ, ಶ್ರೀರಾಮಕೃಷ್ಣರ ಇತರ ಸಂಬಂಧಿಕರು, ಹಾಗೂ ಅವರ ಸಂನ್ಯಾಸೀ ಶಿಷ್ಯಂದಿರು ಬರೆದ ಸ್ಮೃತಿಲೇಖನಗಳಿವೆ. ಸಂನ್ಯಾಸಿ ಶಿಷ್ಯಂದಿರ ಲೇಖನಗಳೇ ಹೆಚ್ಚಾಗಿರುವ ಈ ಭಾಗದಲ್ಲಿ ಭಾರತೀಯ ಆಧ್ಯಾತ್ಮಿಕ ಪರಂಪರೆಯ ಗುರು-ಶಿಷ್ಯ ಸಂಬಂಧದ ಅಭೂತಪೂರ್ವವೆನ್ನಬಹುದಾದ ಚಿತ್ರಗಳು ಮೂಡಿಬಂದಿವೆ. ಇಲ್ಲಿ ಶ್ರೀರಾಮಕೃಷ್ಣರ ವ್ಯಕ್ತಿತ್ವದ ವಿವಿಧ ಮುಖಗಳು ಅವರ ಆಪ್ತ ಶಿಷ್ಯಂದಿರ ಮೂಲಕ ಚಿತ್ರಿತ ವಾಗಿರುವುದರಿಂದ, ಇದಕ್ಕೆ ಒಂದು ಅಧಿಕೃತತೆಯೂ, ನೇರವಾಗಿ ದಾಖಲಿಸಲ್ಪಟ್ಟ ಬರವಣಿ ಗೆಯ ದೃಢತೆಯೂ ಲಭ್ಯವಾಗಿದೆ.

ಎರಡನೆಯ ಭಾಗದಲ್ಲಿ ಪ್ರಧಾನವಾಗಿ ಗೃಹಸ್ಥ ಶಿಷ್ಯಂದಿರ ಹಾಗೂ ಭಕ್ತರ ಹಲವು ಸ್ಮೃತಿಚಿತ್ರಗಳಿವೆ. ಶ್ರೀರಾಮಕೃಷ್ಣರು ಕೇವಲ ಸಂನ್ಯಾಸಿಗಳಿಗೆ ಮಾತ್ರ ಆದರ್ಶವಾಗಿರಲಿಲ್ಲ; ಗೃಹಸ್ಥರಿಗೂ ಸಾಕ್ಷಾತ್ಕಾರದ ಮಾರ್ಗವನ್ನು ತೋರಿಸಿಕೊಟ್ಟರು, ಅವರಿಗೂ ಆದರ್ಶ ಜೀವನ ವನ್ನು ಸ್ವತಃ ಆಚರಿಸಿ ತೋರಿಸಿಕೊಟ್ಟರು. ಇಲ್ಲಿ ಬರುವ ಸ್ಮೃತಿಚಿತ್ರಗಳಲ್ಲಿ ಶ್ರೀರಾಮಕೃಷ್ಣರ ಇನ್ನೊಂದು ಬಗೆಯ ವ್ಯಕ್ತಿತ್ವವನ್ನು ಕಾಣುತ್ತೇವೆ; ಮುಂದೆ ಸಂನ್ಯಾಸಿಗಳಾಗಲಿರುವ ಯುವಕರ ಮುಂದೆ ಅವರ ತರಬೇತಿಗಾಗಿ ಹಲವು ಬಾರಿ ಕಠಿಣವಾಗಿ ಶಿಕ್ಷಿಸುವ, ಇನ್ನು ಹಲವು ಸಲ ತ್ಯಾಗ, ವೈರಾಗ್ಯಗಳನ್ನು ಪ್ರೇರೇಪಿಸುವ ಗುರುವಾಗಿ ಅವರು ಕಂಡುಬಂದರೆ, ಗೃಹಸ್ಥ ಭಕ್ತರ ಮುಂದೆ ಅವರ ಕಷ್ಟ, ಬವಣೆ, ದುಃಖಗಳನ್ನು ಆಲಿಸುತ್ತ, ಅವರನ್ನು ಸಂತೈಸಿ ಭಗವಂತನ ಕಡೆಗೆ ಕರೆದೊಯ್ಯುವ ದಯಾಮಯನಾಗಿ ಕಾಣಿಸುತ್ತಾರೆ.

ಮೂರನೆಯ ಭಾಗದಲ್ಲಿ ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದ ಇತರ ಗಮನಾರ್ಹ ವ್ಯಕ್ತಿಗಳ ಸ್ಮೃತಿಚಿತ್ರಗಳಿವೆ. ಬ್ರಾಹ್ಮಭಕ್ತರು, ಅಶ್ವಿನೀಕುಮಾರ ದತ್ತರಂತ ಪ್ರಸಿದ್ಧ ನಾಯಕರ ಬರಹಗಳು ಇಲ್ಲಿವೆ. ವಿಭಿನ್ನ ಸಂಪ್ರದಾಯಗಳ ಪ್ರಮುಖ ವ್ಯಕ್ತಿಗಳು ಶ್ರೀರಾಮಕೃಷ್ಣರಲ್ಲಿ ಕಂಡ ವಿಶಿಷ್ಟ ಗುಣಗಳು ಇಲ್ಲಿ ದಾಖಲಾಗಿವೆ. ನಾಲ್ಕನೆಯ ಭಾಗವೇ ಅನುಬಂಧಗಳು; ಇದರಲ್ಲಿ ಸ್ವಾಮಿ ಶಾರದಾನಂದರು ಬರೆದ ‘ಶ್ರೀರಾಮಕೃಷ್ಣರು - ಹೊಸ ವಿಚಾರಗಳು’, ‘ಶ್ರೀರಾಮಕೃಷ್ಣರ ಭಾವಚಿತ್ರಗಳು’ ಹಾಗೂ ‘ದಕ್ಷಿಣೇಶ್ವರ ದೇವಾಲಯ’ ಎಂಬ ಮೂರು ಲೇಖನಗಳಿವೆ. ಶ್ರೀರಾಮಕೃಷ್ಣರ ಜೀವನವನ್ನು ಸಮಗ್ರವಾಗಿ ತಿಳಿಯಬಯಸುವವರಿಗೆ ಇವು ಅತ್ಯಮೂಲ್ಯವಾದ ಮಾಹಿತಿಗಳನ್ನು ಒದಗಿ ಸುತ್ತವೆ. ಹಲವು ಪೂರಕ ಮಾಹಿತಿಗಳಿಂದಲೂ, ಶ್ರೀರಾಮಕೃಷ್ಣರ ಹಾಗೂ ಅವರಿಗೆ ಸಂಬಂಧ ಪಟ್ಟ ಇತರ ಮಹತ್ವದ ವ್ಯಕ್ತಿಗಳ ಹಲವು ಭಾವಚಿತ್ರಗಳಿಂದಲೂ ತುಂಬಿರುವ ಈ ಗ್ರಂಥವು ಹಲವು ದೃಷ್ಟಿಗಳಿಂದ ಒಂದು ಸಂಗ್ರಹಯೋಗ್ಯ ಗ್ರಂಥವಾಗಿದೆ.